# ದ್ವಾದಶ ಜ್ಯೋತಿರ್ಲಿಂಗಗಳು

ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ

*ದ್ವಾದಶ ಜ್ಯೋತಿರ್ಲಿಂಗಗಳು ಹಿಂದೂಗಳಲ್ಲಿ ಭಕ್ತಿಭಾವವನ್ನು ಕೆರಳಿಸುತ್ತವೆ. ಅವುಗಳ ಪೌರಾಣಿಕ ಹಿನ್ನೆಲೆಯನ್ನು ಲೇಖಕರು ವಿವರಿಸಿದ್ದಾರೆ. ಶ್ರೀಲಕ್ಷ್ಮಣದಾಸ ವೇಲಣಕರರು ಹರಿಕಥೆಯಲ್ಲಿ ಪ್ರವೀಣರು. ಹರಿಕಥೆಯಲ್ಲಿ ತರಬೇತಿಯನ್ನು ನೀಡುವ ಸಂಸ್ಥೆಯೊಂದನ್ನು ಅವರು ಬೆಂಗಳೂರಿನಲ್ಲಿ ನಡೆಸುತ್ತಿರುವರು.*

ಸನಾತನ ವೈದಿಕ ಧರ್ಮದಲ್ಲಿ ಆತ್ಮೋನ್ನತಿ ಅಂದರೆ ಜೀವಿಯ ಪೂರ್ಣಾವಸ್ಥೆಯೇ ಪರಮೋಚ್ಚ ಧ್ಯೇಯವಾಗಿದೆ. ಈ ಧ್ಯೇಯದ ಸಿದ್ಧಿಗಾಗಿ ಅನೇಕ ಸಾಧನಾ ಪಥಗಳನ್ನು ಅನುಭಾವಿಗಳೂ ಋಷಿಗಳೂ ತೋರಿಸಿಕೊಟ್ಟಿರುವರು. ಆ ಸಾಧನಾಮಾರ್ಗಗಳಲ್ಲಿ ತೀರ್ಥಯಾತ್ರೆಯೂ ಒಂದು. "ಯಾತ್ರೆಗೆ ನಡಿ-ನಡಿ, ಪಾತ್ರರ ಒಡಗೂಡಿ, ಗಾತ್ರವ ಬಳಲಿಸುತ, ಸೂತ್ರ ನಾಮಕ ಹರಿಯ ದರ್ಶಿಸುವ" ಎಂಬ ಅನುಭವದ ನುಡಿಯನ್ನು ದಾಸಶ್ರೇಷ್ಠರಾದ ವಿಜಯದಾಸರು ಹಾಡಿರುವರು. ತೀರ್ಥಯಾತ್ರೆಯು ಕೇವಲ ಜಲ-ವಾಯುಗಳ ಪರಿವರ್ತನೆಯಲ್ಲ, ಮನಸ್ಸಿಗೆ ಮುದ ನೀಡುವ ತಿರುಗಾಟವೂ ಅಲ್ಲ. ಮನ-ಬುದ್ಧಿಗಳಿಗೆ ಸಂಸ್ಕಾರ ನೀಡುವಂತಹ ಒಂದು ಸಾಧನಾ ಪದ್ಧತಿ. ತೀರ್ಥಯಾತ್ರೆಯಲ್ಲಿ ಬಾಹ್ಯ ಆಕರ್ಷಣೆಗಳಾದ ಊರು, ಜನ, ಸಂತೆ, ದೊಡ್ಡ-ದೊಡ್ಡ ಸೌಧಗಳು ಇಷ್ಟನ್ನೆ ಸಂದರ್ಶಿಸಿದರೆ ಆ ಯಾತ್ರೆಯು ಕೇವಲ ಹಣ ವ್ಯಯಿಸುವ ಒಂದು ಮೋಜು ಆದೀತು. ಪ್ರತಿಯೊಂದು ಕ್ಷೇತ್ರದಲ್ಲಿಯೂ ನೆಲೆಸಿರುವ ಪರಮೇಶ್ವರನ ವಿಭೂತಿ ರೂಪಗಳ ದರ್ಶನವೇ ತೀರ್ಥಯಾತ್ರೆಯ ಫಲ. ತನ್ನಲ್ಲೇ ಇರುವ ಚೈತನ್ಯಮಯ ಸ್ವರೂಪವನ್ನು ಗುರುತಿಸಿಕೊಳ್ಳಲು, ಆ ಸರ್ವವ್ಯಾಪಿ ಚೈತನ್ಯಪರಮೇಶ್ವರನ ಅನುಸಂಧಾನವೇ ಯಾತ್ರೆಯ ವಿಧಾನ.

ಭಾರತೀಯರಲ್ಲಿ ತೀರ್ಥಯಾತ್ರೆಯು ಆತ್ಮೋನ್ನತಿಯ ಸಾಧನೆ ಇರುವಂತೆ, ಸಮಗ್ರ ಮಾತೃಭೂಮಿಯ ದರ್ಶನ, ಪರಿಚಯವೂ ಒಟ್ಟಿಗೆ ಸೇರಿಕೊಂಡಿದೆ. ಕೇವಲ ನಾಲ್ಕು ಗೋಡೆಗಳ ಮಧ್ಯದಲ್ಲಿರುವವನ ವಿಚಾರ-ವ್ಯಾಪ್ತಿ, ವ್ಯವಹಾರ, ಅರಿವು ಅಷ್ಟಕ್ಕೆ ಸೀಮಿತವಾದೀತು. ಅದರಿಂದ ನಾನು ಎಷ್ಟು ದೊಡ್ಡವನು ಎಂಬ ಅಹಂಕಾರವೂ ಜೊತೆಗಿದ್ದೀತು. ಆದರೆ ವಿಶಾಲ ಭಾರತ ದರ್ಶನ ಮಾಡಿದಾಗ ತನ್ನ ಕಿರಿತನ ಅರ್ಥವಾಗಿ ಅಹಂಕಾರನಾಶವಾಗಲು ಸಹಾಯವಾದೀತು.

ದ್ವಾದಶ ಜ್ಯೋತಿರ್ಲಿಂಗಗಳ ದರ್ಶನದಿಂದ ಪುಣ್ಯದ ಸಂಚಯವೇನೋ ಆಗಿಯೇ ಆಗುತ್ತದೆ. ಜೊತೆಗೆ ಉತ್ತರದ ಹಿಮಾಲಯದಿಂದ ಹಿಡಿದು ದಕ್ಷಿಣದ ರಾಮೇಶ್ವರದವರೆಗೆ, ಭಾರತದ ಸಮಗ್ರ ಪರಿಚಯವಾಗುತ್ತದೆ, ಜನರ ಆಚಾರ-ವಿಚಾರ, ನಡೆ-ನುಡಿಗಳ ಪರಿಚಯವಾಗುತ್ತದೆ. ಇದರಿಂದ ವಿಶ್ವಬಂಧುತ್ವ ಉಂಟಾಗಿ ವಿಶ್ವನಾಥನ ವಿಶ್ವರೂಪದ ದರ್ಶನವೂ ಉಂಟಾಗುತ್ತದೆ. ಈ ಲೇಖನದಲ್ಲಿ ದ್ವಾದಶ ಜ್ಯೋತಿರ್ಲಿಂಗಗಳ ಸೂಕ್ಷ್ಮವಾದ ಪರಿಚಯವನ್ನು ಕೊಡಲಾಗಿದೆ. ಭಾವುಕರು ಓದಿ, ಚಿಂತನೆಗೈದು ಲಾಭಾನ್ವಿತರಾಗುವರೆಂಬ ಅನಿಸಿಕೆ ನಮ್ಮದು. ಬನ್ನಿ ಹೊರಡೋಣ—ದ್ವಾದಶ ಜ್ಯೋತಿರ್ಲಿಂಗಗಳ ದರ್ಶನಕ್ಕೆ—"ಹರ ಹರ ಮಹಾದೇವ" ಎನ್ನುತ್ತ.

### ೧. ಶ್ರೀಸೋಮನಾಥ

ಶ್ರೀಸೋಮನಾಥ ಜ್ಯೋತಿರ್ಲಿಂಗವು ಸೋಮನಾಥ ಎಂಬ ಹೆಸರಿನಿಂದ ವಿಶ್ವಪ್ರಸಿದ್ಧ ದೇವಾಲಯದಲ್ಲಿ ಸ್ಥಾಪಿತವಾಗಿದೆ. ಈ ದೇವಾಲಯವು ಗುಜರಾತ್ ಪ್ರಾಂತದ ಕಾಠಿಯಾವಾಡ ಕ್ಷೇತ್ರದಲ್ಲಿ ಸಮುದ್ರತೀರದಲ್ಲಿ ನೆಲೆಸಿದೆ. ಮೊದಲು ಈ ಕ್ಷೇತ್ರವನ್ನು ಪ್ರಭಾಸಕ್ಷೇತ್ರವೆಂದು ಹೇಳುತ್ತಿದ್ದರು. ಇಲ್ಲಿಯೇ ಭಗವಾನ್ ಶ್ರೀಕೃಷ್ಣನು ಜರಾ ಎಂಬ ಬೇಡನ ಬಾಣವನ್ನು ನಿಮಿತ್ತವಾಗಿಸಿಕೊಂಡು ತನ್ನ ಲೀಲೆಯನ್ನು ಮರೆಯಾಗಿಸಿದ್ದನು. ಇಲ್ಲಿಯ ಜ್ಯೋತಿರ್ಲಿಂಗದ ಕಥೆಯು ಪುರಾಣಗಳಲ್ಲಿ ಈ ಪ್ರಕಾರ ಬಂದಿದೆ:

ದಕ್ಷಪ್ರಜಾಪತಿಗೆ ಇಪ್ಪತ್ತೇಳು ಹೆಣ್ಣುಮಕ್ಕಳಿದ್ದರು. ಅವರೆಲ್ಲರ ಮದುವೆಯು ಚಂದ್ರನೊಂದಿಗೆ ಆಗಿತ್ತು. ಆದರೆ ಚಂದ್ರನಿಗೆ ಅವರಲ್ಲಿನ ಕೇವಲ ರೋಹಿಣಿಯಲ್ಲೇ ಹೆಚ್ಚಿನ ಅನುರಾಗವಿತ್ತು. ಅವನ ಈ ವ್ಯಾಮೋಹದಿಂದ ದಕ್ಷಪ್ರಜಾಪತಿಯ ಉಳಿದ ಹೆಣ್ಣುಮಕ್ಕಳಿಗೆ ತುಂಬಾ ಕಷ್ಟವಾಗಿತ್ತು. ಅವರು ತಮ್ಮ ವ್ಯಥೆಯ ಕಥೆಯನ್ನು ತಂದೆಯ ಬಳಿ ಹೇಳಿಕೊಂಡರು. ದಕ್ಷಪ್ರಜಾಪತಿಯು ಚಂದ್ರನಿಗೆ ಅನೇಕ ವಿಧಗಳಿಂದ ಸಮಜಾಯಿಸಿದನು. ಆದರೆ ರೋಹಿಣಿಗೆ ವಶೀಭೂತನಾದ ಚಂದ್ರನಲ್ಲಿ ಇದರಿಂದ ಯಾವ ಪರಿಣಾಮವೂ ಆಗಲಿಲ್ಲ. ಕೊನೆಗೆ ದಕ್ಷನು ಸಿಟ್ಟುಗೊಂಡು ಅವನಿಗೆ "ಕ್ಷಯರೋಗಿಯಾಗು" ಎಂದು ಶಪಿಸಿದನು. ಈ ಶಾಪದಿಂದಾಗಿ ಚಂದ್ರನು ಕೂಡಲೇ ಕ್ಷಯಗ್ರಸ್ತನಾದನು. ಆಗ ಭೂಮಿಯಮೇಲೆ ಸುರಿಯುತ್ತಿದ್ದ ಸುಧಾ-ಶೀತಲತೆ ನಿಂತುಹೋಯಿತು. ಎಲ್ಲೆಡೆ ಹಾಹಾಕಾರವೆದ್ದಿತು. ಚಂದ್ರನೂ ಕೂಡ ಅತೀವ ದುಃಖಿ ಹಾಗೂ ಚಿಂತಿತನಾಗಿದ್ದನು. ಅವನ ಪ್ರಾರ್ಥನೆಯಂತೆ ಇಂದ್ರಾದಿ ದೇವತೆಗಳು, ವಸಿಷ್ಠಾದಿ ಋಷಿಗಳು ಅವನ ಉದ್ಧಾರಕ್ಕಾಗಿ ಪಿತಾಮಹ ಬ್ರಹ್ಮದೇವರ ಬಳಿಗೆ ಹೋದರು. ಅವರ ಎಲ್ಲ ಮಾತುಗಳನ್ನು ಕೇಳಿ ಬ್ರಹ್ಮದೇವರು ಹೇಳಿದರು: "ಚಂದ್ರನು ತನ್ನ ಶಾಪವಿಮೋಚನೆಗಾಗಿ ಉಳಿದ

ದೇವತೆಗಳೊಂದಿಗೆ ಪವಿತ್ರ ಪ್ರಭಾಸಕ್ಷೇತ್ರಕ್ಕೆ ಹೋಗಿ ಭಗವಾನ್ ಮೃತ್ಯುಂಜಯನ ಆರಾಧನೆ ಮಾಡಲಿ. ಅವನ ಕೃಪೆಯಿಂದ ಖಂಡಿತವಾಗಿ ಇವನ ಶಾಪ ಕಳೆದು ರೋಗಮುಕ್ತನಾಗುವನು."

ಬ್ರಹ್ಮದೇವರ ಮಾತಿನಂತೆ ಚಂದ್ರನು ಪ್ರಭಾಸಕ್ಷೇತ್ರಕ್ಕೆ ಬಂದು ಭಗವಾನ್ ಮೃತ್ಯುಂಜಯನ ಆರಾಧನೆಯಲ್ಲಿ ತೊಡಗಿದನು. ಅವನು ಘೋರವಾದ ತಪಸ್ಸನ್ನಾಚರಿಸುತ್ತ ಹತ್ತು ಕೋಟಿ ಮೃತ್ಯುಂಜಯ ಜಪವನ್ನು ಮಾಡಿದನು. ಇದಕ್ಕೆ ಒಲಿದ ಮೃತ್ಯುಂಜಯ ಭಗವಾನ್ ಶಿವನು ಚಂದ್ರನಿಗೆ ಅಮರತ್ವದ ವರವನ್ನು ಕರುಣಿಸುತ್ತಾ: "ಎಲೈ ಚಂದ್ರನೆ! ನೀನು ಚಿಂತಿಸಬೇಡ. ನನ್ನ ವರದಿಂದ ನಿನ್ನ ಶಾಪವು ಖಂಡಿತವಾಗಿ ಕಳೆದುಹೋಗುತ್ತದೆ. ಜೊತೆಗೆ ಪ್ರಜಾಪತಿ ದಕ್ಷನ ಮಾತುಗಳೂ ನಿಜವಾದಂತಾಗುತ್ತದೆ. ಕೃಷ್ಣಪಕ್ಷದಲ್ಲಿ ಪ್ರತಿದಿನ ನಿನ್ನ ಒಂದೊಂದು ಕಲೆ ಕ್ಷೀಣವಾಗಿ ಪುನಃ ಶುಕ್ಲಪಕ್ಷದಲ್ಲಿ ಅದೇ ಕ್ರಮದಿಂದ ಒಂದೊಂದು ಕಲೆಯು ಬೆಳೆಯುತ್ತ, ಪ್ರತಿ ಪೂರ್ಣಿಮೆಯಂದು ನಿನಗೆ ಪೂರ್ಣ ಚಂದ್ರತ್ವ ಪ್ರಾಪ್ತವಾಗುತ್ತ ಇರುವುದು" ಎಂದು ಹರಸಿದನು. ಚಂದ್ರನಿಗೆ ದೊರಕಿದ ಈ ವರದಾನದಿಂದ ಎಲ್ಲ ಲೋಕದ ಪ್ರಾಣಿಗಳೂ ಸಂತೋಷಗೊಂಡವು. ಸುಧಾಕರ ಚಂದ್ರನು ಹಿಂದಿನಂತೆ ಹತ್ತೂ ದಿಕ್ಕುಗಳಲ್ಲಿ ಅಮೃತವನ್ನು ಸುರಿಸತೊಡಗಿದನು.

ಶಾಪಮುಕ್ತನಾದ ಚಂದ್ರನು ಬೇರೆ ದೇವತೆಗಳೊಂದಿಗೆ ಕೂಡಿ ಭಗವಾನ್ ಮೃತ್ಯುಂಜಯನನ್ನು, "ಹೇ ಮಹಾದೇವಾ! ನೀನು ಜಗಜ್ಜನನಿ ಪಾರ್ವತಿಯೊಂದಿಗೆ ಎಲ್ಲ ಪ್ರಾಣಿಗಳ ಉದ್ಧಾರಕ್ಕಾಗಿ ಸದಾಕಾಲ ಇಲ್ಲೇ ವಾಸಮಾಡು ಪ್ರಭು" ಎಂದು ಪ್ರಾರ್ಥಿಸಿದನು. ಭಗವಾನ್ ಶಿವನು ಅವನ ಪ್ರಾರ್ಥನೆಯನ್ನು ಸ್ವೀಕರಿಸಿ, ಜ್ಯೋತಿರ್ಲಿಂಗದ ರೂಪದಲ್ಲಿ ಪಾರ್ವತಿಯೊಂದಿಗೆ ಅಂದಿನಿಂದ ಅಲ್ಲೇ ಇರತೊಡಗಿದನು. ಚಂದ್ರನ ಇನ್ನೊಂದು ಹೆಸರು "ಸೋಮ" ಎಂದು. ಅವನು ಶಿವನನ್ನೇ ತನ್ನ ನಾಥ, ಒಡೆಯ ಎಂದು ತಿಳಿದು ಇಲ್ಲಿ ತಪಸ್ಸನ್ನು ಮಾಡಿದ್ದರಿಂದ ಈ ಜ್ಯೋತಿರ್ಲಿಂಗವನ್ನು "ಸೋಮನಾಥ" ಎಂದು ಹೇಳುತ್ತಾರೆ.

## ೨. ಮಲ್ಲಿಕಾರ್ಜುನ

ಶ್ರೀಮಲ್ಲಿಕಾರ್ಜುನ ಜ್ಯೋತಿರ್ಲಿಂಗವು ಆಂಧ್ರಪ್ರದೇಶದ ಕೃಷ್ಣಾನದಿಯ ತೀರದಲ್ಲಿ ಶ್ರೀಶೈಲಪರ್ವತದ ಮೇಲೆ ನೆಲೆಸಿದೆ. ಈ ಪರ್ವತವನ್ನು ದಕ್ಷಿಣದ ಕೈಲಾಸ ಎಂದು ಹೇಳಲಾಗುತ್ತದೆ. ಮಹಾಭಾರತ, ಶಿವಪುರಾಣ, ಪದ್ಮಪುರಾಣ ಮುಂತಾದ ಧರ್ಮಗ್ರಂಥಗಳಲ್ಲಿ ಇದರ ಮಹಿಮೆ ಮತ್ತು ಮಹತ್ವವನ್ನು ವಿಸ್ತಾರವಾಗಿ ವರ್ಣಿಸಲಾಗಿದೆ.

ಪುರಾಣಗಳಲ್ಲಿ ಈ ಜ್ಯೋತಿರ್ಲಿಂಗದ ಕಥೆ ಇಂತಿದೆ: ಒಮ್ಮೆ ಭಗವಾನ್ ಶಿವನ ಇಬ್ಬರು ಪುತ್ರರಾದ ಗಣಪತಿ ಹಾಗೂ ಕಾರ್ತಿಕೇಯರಿಗೆ ತಾಯಿ ಪಾರ್ವತಿ ತನ್ನ ಕೊರಳಲ್ಲಿದ್ದ ಮುಕ್ತಾಹಾರವನ್ನು ತೋರಿಸಿ ಹೇಳಿದಳು, "ನಿಮ್ಮಲ್ಲಿ ಯಾರು ಇಡೀ ಪೃಥ್ವಿಯ ಪ್ರದಕ್ಷಿಣೆಯನ್ನು ಏಳು ಬಾರಿ ಮಾಡಿ ಮೊದಲು ಬರುವಿರೋ ಅವರಿಗೆ ಇದನ್ನು ಕೊಡಲಾಗುವುದು" ಎಂದು. ತಾಯಿಯ ಮಾತನ್ನು ಕೇಳಿದ ಕಾರ್ತಿಕೇಯನು ಕೂಡಲೇ ಪೃಥ್ವಿಯ ಪ್ರದಕ್ಷಿಣೆಗಾಗಿ ನವಿಲನ್ನೇರಿ ಹೊರಟನು. ಆದರೆ ಗಣೇಶನ ಶರೀರವು ಸ್ಥೂಲವಾಗಿತ್ತು. ಅಲ್ಲದೆ ವಾಹನ ಇಲಿ. ಅವನು ಕಾರ್ತಿಕೇಯನ ಸಮ ಹೇಗೆ ಓಡಬಲ್ಲನು? ಅವನ ಶರೀರ ಸ್ಥೂಲವಿದ್ದರೂ ಬುದ್ಧಿಯು ಸೂಕ್ಷ್ಮ ಹಾಗೂ ತೀಕ್ಷ್ಣವಾಗಿತ್ತು. ಗಣಪತಿಯು ತಡಮಾಡದೆ ಭೂಪ್ರದಕ್ಷಿಣೆಯ ಸುಲಭವಾದ ಒಂದು ಉಪಾಯವನ್ನು ಹುಡುಕಿದನು. ಎದುರಿಗೆ ಕುಳಿತಿದ್ದ ತಾಯಿಯನ್ನು ಭಕ್ತಿಯಿಂದ ಪೂಜಿಸಿ, ಬಳಿಕ ತಾಯಿಗೇ ಏಳು ಪ್ರದಕ್ಷಿಣೆ ಮಾಡಿ ಭೂಪ್ರದಕ್ಷಿಣೆ ಮಾಡಿ ಮುಗಿಸಿದನು. ತಾಯಿಯಲ್ಲಿಯೇ ಇಡೀ ವಿಶ್ವವು ಅಡಗಿರುವುದೆಂಬುದು ಅವನ ನಂಬಿಕೆ.



ಶ್ರೀಮಲ್ಲಿಕಾರ್ಜುನ ದೇವಸ್ಥಾನ

ಇಡೀ ಭೂಪ್ರದಕ್ಷಿಣೆ ಮಾಡಿ ಕಾರ್ತಿಕೇಯನು ಮರಳಿ ಬಂದಾಗ ಗಣಪತಿಯ ಕೊರಳಲ್ಲಿ ಮುಕ್ತಾಹಾರವಿದ್ದಿತು. ಇದನ್ನು ನೋಡಿ ಕಾರ್ತಿಕೇಯನು ಭಾರೀ ಸಿಟ್ಟುಗೊಂಡು ಕ್ರೌಂಚ ಪರ್ವತಕ್ಕೆ ಹೊರಟುಹೋದನು. ತಾಯಿ ಪಾರ್ವತಿಯು ಅವನನ್ನು ಸಮಾಧಾನ ಪಡಿಸಲು ಅಲ್ಲಿಗೆ ಹೋದಳು. ಜೊತೆಗೆ ಭಗವಾನ್ ಶಂಕರನು ಅಲ್ಲಿಗೆ ತೆರಳಿ ಜ್ಯೋತಿರ್ಲಿಂಗದ ರೂಪದಲ್ಲಿ ಪ್ರಕಟನಾದನು. ಅಂದಿನಿಂದ ಮಲ್ಲಿಕಾರ್ಜುನ-ಜ್ಯೋತಿರ್ಲಿಂಗ ಎಂಬ ಹೆಸರಿನಿಂದ ಖ್ಯಾತನಾದನು. ಇವನ ಅರ್ಚನೆಯು ಮೊಟ್ಟಮೊದಲು ಮಲ್ಲಿಗೆ ಹೂವಿನಿಂದ ಮಾಡಲಾಗಿತ್ತು. ಮಲ್ಲಿಕಾರ್ಜುನ ಹೆಸರು ಉಂಟಾಗಲು ಇದೂ ಒಂದು ಕಾರಣವಾಗಿದೆ.

ಇನ್ನೊಂದು ಕಥೆ ಹೀಗಿದೆ: ಈ ಪರ್ವತದ ಸಮೀಪದಲ್ಲಿ ಎಂದೋ ರಾಜಾ ಚಂದ್ರಗುಪ್ತನ ರಾಜಧಾನಿಯಿತ್ತು. ಯಾವುದೋ ವಿಶೇಷ ವಿಪತ್ತಿನ ನಿವಾರಣೆಗಾಗಿ ಅವನ ಮಗಳು ಅರಮನೆಯಿಂದ ಹೊರಬಿದ್ದು ಈ ಪರ್ವತರಾಜನ ಆಶ್ರಯಕ್ಕೆ ಬಂದು ಇಲ್ಲಿಯ ಗೊಲ್ಲರೊಡನೆ ಇರುತ್ತಿದ್ದಳು. ಆ ರಾಜಕನ್ಯೆಯ ಬಳಿ ತುಂಬಾ ಶುಭಲಕ್ಷಣ ಸಂಪನ್ನವಾದ ಒಂದು ಹಸು ಇತ್ತು. ಆ ಹಸುವಿನ ಹಾಲನ್ನು ರಾತ್ರಿಯಲ್ಲಿ ಯಾರೋ ಕರೆಯುತ್ತಿದ್ದರು. ಒಂದು ದಿನ ಅಕಸ್ಮಾತ್ ಆ ರಾಜಕನ್ಯೆಯು ಕಳ್ಳನು ಹಾಲು ಕರೆಯುವುದನ್ನು ನೋಡಿದಳು. ಸಿಟ್ಟುಗೊಂಡು ಆ ಕಳ್ಳನ ಕಡೆಗೆ ಓಡಿದಳು. ಆದರೆ ಹಸುವಿನ ಬಳಿಗೆ ತಲುಪಿ ನೋಡಿದಾಗ ಅಲ್ಲಿ

ಶಿವಲಿಂಗದ ಹೊರತು ಬೇರೆ ಏನೂ ಕಾಣಿಸಲಿಲ್ಲ. ಅಂದಿನಿಂದ ಆ ಶಿವಲಿಂಗವನ್ನು ಪೂಜಿಸುತ್ತಾ, ಕೆಲವು ದಿನಗಳಲ್ಲಿ ವಿಶಾಲವಾದ ಒಂದು ಮಂದಿರವನ್ನು ಕಟ್ಟಿಸಿದಳು. ಈ ಶಿವಲಿಂಗವೇ ಮಲ್ಲಿಕಾರ್ಜುನ ಹೆಸರಿನಿಂದ ಪ್ರಸಿದ್ಧವಾಗಿದೆ. ಶಿವರಾತ್ರಿಯಂದು ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ.

### ೩. ಶ್ರೀಮಹಾಕಾಲೇಶ್ವರ

ಪರಮಪವಿತ್ರ ಶ್ರೀಮಹಾಕಾಲೇಶ್ವರ ಜ್ಯೋತಿರ್ಲಿಂಗವು ಮಧ್ಯಪ್ರದೇಶದ ಉಜ್ಜಯಿನಿಯಲ್ಲಿದೆ. ಪುಣ್ಯಪ್ರದ ಕ್ಷಿಪ್ರಾನದಿಯ ತೀರದಲ್ಲಿ ನೆಲೆಸಿದ ಈ ಪ್ರಾಚೀನವಾದ ಉಜ್ಜಯಿನಿಯನ್ನು ಹಿಂದಿನ ಕಾಲದಲ್ಲಿ ಅವಂತಿಕಾಪುರಿ ಎಂದು ಹೇಳುತ್ತಿದ್ದರು. ಇದು ಭಾರತದ ಪರಮಪವಿತ್ರ ಸಪ್ತಪುರಿಗಳಲ್ಲಿ ಒಂದಾಗಿದೆ.

ಈ ಜ್ಯೋತಿರ್ಲಿಂಗದ ಕಥೆಯನ್ನು ಪುರಾಣಗಳಲ್ಲಿ ಈ ಪ್ರಕಾರ ಹೇಳಲಾಗಿದೆ: ಹಿಂದಿನ ಕಾಲದಲ್ಲಿ ಉಜ್ಜಯಿನಿಯಲ್ಲಿ ಚಂದ್ರಸೇನರಾಜನು ರಾಜ್ಯವನ್ನಾಳುತ್ತಿದ್ದನು. ಅವನು ಪರಮ ಶಿವಭಕ್ತನಾಗಿದ್ದನು. ಒಂದು ದಿನ ರಾಜನು ಶಿವಪೂಜೆ ಮಾಡುತ್ತಿರುವಾಗ ಶ್ರೀಕರನೆಂಬ ಐದು ವರ್ಷದ ಗೊಲ್ಲ ಬಾಲಕನು ತನ್ನ ತಾಯಿಯೊಂದಿಗೆ ಆ ಕಡೆಯಿಂದ ಹೋಗುತ್ತಿದ್ದನು. ರಾಜನ ಶಿವಪೂಜೆಯನ್ನು ನೋಡಿ ಅವನಿಗೆ ವಿಸ್ಮಯ ಹಾಗೂ ಕುತೂಹಲ ಉಂಟಾಯಿತು. ಅವನೂ ಸ್ವತಃ ಅದೇ ರೀತಿಯಿಂದ ಶಿವಪೂಜೆಯನ್ನು ಮಾಡಲು ಉತ್ಸುಕನಾದನು. ಪೂಜೆಯ ಅಷ್ಟು ಸಾಮಗ್ರಿಗಳನ್ನು ಹೊಂದಿಸಿಕೊಳ್ಳಲಾರದೆ ಅವನು ಒಂದು ಕಲ್ಲನ್ನು ತಂದು ಮನೆಯೊಳಗಿಟ್ಟು, ಅದನ್ನೇ ಶಿವರೂಪವೆಂದು ತಿಳಿದು, ನೀರು, ಗಂಧ, ಹೂವು, ಹಣ್ಣು ಮೊದಲಾದ ದೊರಕಿದ ವಸ್ತುಗಳಿಂದ ಶ್ರದ್ಧೆಯಿಂದ ಪೂಜಿಸತೊಡಗಿದನು. ಪೂಜೆಯಲ್ಲಿ ತಲ್ಲೀನನಾದನು. ತಾಯಿಯು ಊಟಕ್ಕಾಗಿ ಕರೆದಾಗಲೂ ಅವನು ಪೂಜೆಯನ್ನು ಬಿಟ್ಟುಹೋಗಲಿಲ್ಲ. ಕೊನೆಗೆ ತಾಯಿಯು ಗದರಿಸಿ ಆ ಕಲ್ಲನ್ನು ಎತ್ತಿ ದೂರಕ್ಕೆ ಎಸೆದುಬಿಟ್ಟಳು. ಇದರಿಂದ ಅತಿ ದುಃಖಿತನಾದ ಆ ಬಾಲಕನು ಜೋರಾಗಿ ಅಳುತ್ತಾ ಭಗವಾನ್ ಶಿವನನ್ನು ಕೂಗಿ ಕರೆಯುತ್ತಾ ಇದ್ದನು. ಅಳುತ್ತಾ ಅಳುತ್ತಾ ಕೊನೆಗೆ ಅವನು ಮೂರ್ಛಿತನಾಗಿ ಬಿದ್ದುಬಿಟ್ಟನು. ಬಾಲಕನ ಭಕ್ತಿ-ಪ್ರೇಮವನ್ನು ಕಂಡ ಆಶುತೋಷ ಭಗವಾನ್ ಶಿವನು ಅತ್ಯಂತ ಪ್ರಸನ್ನನಾದನು. ಬಾಲಕನು ಎಚ್ಚರಗೊಂಡು ಕಣ್ಣುಬಿಟ್ಟು ನೋಡಿದಾಗ ಅವನ ಎದುರು ಭವ್ಯವಾದ ಹಾಗೂ ಅತಿ ವಿಶಾಲವಾದ ಸ್ವರ್ಣರತ್ನಗಳಿಂದ ನಿರ್ಮಿತ ಒಂದು ಮಂದಿರವನ್ನು ಕಂಡನು. ಆ ಮಂದಿರದ ಒಳಗೆ ಒಂದು ಭಾರೀ ಪ್ರಕಾಶಪೂರ್ಣ ಜ್ಯೋತಿರ್ಲಿಂಗವು ವಿರಾಜಮಾನವಾಗಿತ್ತು. ಬಾಲಕನು ಆನಂದ ತುಂದಿಲನಾಗಿ ಭಗವಾನ್ ಶಿವನನ್ನು ಸ್ತುತಿಸ ತೊಡಗಿದನು. ತಾಯಿಗೆ ಈ ವಾರ್ತೆ ತಿಳಿಯುತ್ತಲೇ ಓಡಿ ಬಂದು ತನ್ನ ಮುದ್ದಿನ ಮಗುವನ್ನು ಅಪ್ಪಿಕೊಂಡಳು. ಬಳಿಕ ರಾಜಾ ಚಂದ್ರಸೇನನು ಅಲ್ಲಿಗೆ ಬಂದು ಆ ಬಾಲಕನ ಭಕ್ತಿ ಮತ್ತು ಸಿದ್ಧಿಯನ್ನು ಕೊಂಡಾಡಿ ಹೊಗಳಿದನು. ನಿಧಾನವಾಗಿ ಅಲ್ಲಿ ನಗರದ ಜನರೆಲ್ಲ ಬಂದು ಸೇರಿದರು. ಅಷ್ಟರಲ್ಲಿ ಅಲ್ಲಿ ಹನುಮಂತನು ಪ್ರಕಟನಾಗಿ ಹೇಳಿದನು—"ಜನರೇ! ಭಗವಾನ್ ಶಂಕರನು ಬೇಗನೇ ಫಲವನ್ನು ಕೊಡುವುದರಲ್ಲಿ ಮೊದಲಿಗನಾಗಿದ್ದಾನೆ. ಈ ಬಾಲಕನ ಭಕ್ತಿಗೆ ಮೆಚ್ಚಿದ ಅವನು ದೊಡ್ಡ-ದೊಡ್ಡ ಋಷಿ-ಮುನಿಗಳು ಸಾವಿರಾರು ವರ್ಷಗಳ ತಪಸ್ಸಿನಿಂದ ಪಡೆಯಲಾರದ ಫಲವನ್ನು ಕರುಣಿಸಿರುವನು. ಈ ಗೋಪಬಾಲಕನ ಎಂಟನೆ ಪೀಳಿಗೆಯಲ್ಲಿ ನಂದಗೋಪನ ಜನ್ಮವಾದೀತು. ದ್ವಾಪರಯುಗದಲ್ಲಿ ಭಗವಾನ್ ಶ್ರೀವಿಷ್ಣುವು ಕೃಷ್ಣಾವತಾರವನ್ನು ನಂದಗೋಪನ ಮನೆಯಲ್ಲಿ ತಾಳಿ ಅನೇಕ ರೀತಿಯ ಲೀಲೆಗಳನ್ನು ಮಾಡುವನು." ಹನುಮಂತನು ಇಷ್ಟನ್ನು ಹೇಳಿ ಅಂತರ್ಧಾನನಾದನು. ಅದೇ ಜಾಗದಲ್ಲಿ ನಿಯಮದಿಂದ ಭಗವಾನ್ ಶಿವನ ಆರಾಧನೆ ಮಾಡುತ್ತಾ ಕೊನೆಗೆ ಶ್ರೀಕರ ಗೋಪನು ಮತ್ತು ಚಂದ್ರಸೇನ ರಾಜನು ಶಿವಪದವನ್ನು ಪಡೆದುಕೊಂಡರು.

ಈ ಜ್ಯೋತಿರ್ಲಿಂಗದ ವಿಷಯದಲ್ಲಿ ಇನ್ನೊಂದು ಕತೆ ಈ ಪ್ರಕಾರವಾಗಿ ಹೇಳಲಾಗುತ್ತದೆ. ಹಿಂದಿನಕಾಲದಲ್ಲಿ ಅವಂತಿಕಾಪುರಿಯಲ್ಲಿ ಓರ್ವ ವೇದಪಾಠೀ, ತಪೋನಿಷ್ಠ, ಅತ್ಯಂತ ತೇಜಸ್ವೀ ಬ್ರಾಹ್ಮಣನಿದ್ದನು. ಒಂದು ದಿನ ದೂಷಣನೆಂಬ ಅನಾಚಾರೀ ಅಸುರನು ಅವನ ತಪಸ್ಸಿನಲ್ಲಿ ವಿಘ್ನವನ್ನೊಡ್ಡಲು ಅಲ್ಲಿಗೆ ಬಂದನು. ಅವನು ಬ್ರಹ್ಮದೇವರ ವರದಿಂದ ತುಂಬಾ ಶಕ್ತಿಶಾಲಿಯಾಗಿದ್ದನು. ಅವನ ಅತ್ಯಾಚಾರದಿಂದ ಎಲ್ಲೆಡೆ ಹಾಹಾಕಾರವೆದ್ದಿತ್ತು. ಬ್ರಾಹ್ಮಣನು ಕಷ್ಟದಲ್ಲಿ ಬಿದ್ದಿರುವುದನ್ನು ಕಂಡು ಪ್ರಾಣಿಮಾತ್ರರಿಗೂ ಶ್ರೇಯಸ್ಸನ್ನು ಮಾಡುವಂತಹ ಭಗವಾನ್ ಶಂಕರನು ಅಲ್ಲಿ ಪ್ರಕಟನಾದನು. ಅವನು ಒಂದೇ ಹುಂಕಾರ ಮಾತ್ರದಿಂದ ಆ ದುಷ್ಟ ಅತ್ಯಾಚಾರಿ ದಾನವನನ್ನು ಅಲ್ಲೇ ಸುಟ್ಟು ಬೂದಿ ಮಾಡಿದನು. ಶಿವನು ಅಲ್ಲಿ ಹುಂಕಾರಸಹಿತ ಪ್ರಕಟನಾದ್ದರಿಂದ ಅವನ ಹೆಸರು ಮಹಾಕಾಲವೆಂದಾಯಿತು. ಆದ್ದರಿಂದ ಈ ಪರಮ ಪವಿತ್ರ ಜ್ಯೋತಿರ್ಲಿಂಗವನ್ನು ಮಹಾಕಾಲ ಎಂಬ ಹೆಸರಿನಿಂದ ತಿಳಿಯಲಾಗುತ್ತದೆ.

### ೪. ಶ್ರೀಓಂಕಾರೇಶ್ವರ, ಶ್ರೀಅಮಲೇಶ್ವರ

ಶ್ರೀಓಂಕಾರೇಶ್ವರ ಜ್ಯೋತಿರ್ಲಿಂಗವು ಮಧ್ಯಪ್ರದೇಶದಲ್ಲಿ ಪವಿತ್ರ ನರ್ಮದಾ ನದಿಯ ತೀರದಲ್ಲಿ ನೆಲೆಸಿದೆ. ಈ ಜಾಗದಲ್ಲಿ ನರ್ಮದೆಯು ಎರಡು ಕವಲಾಗಿ ಹರಿಯುತ್ತಿದ್ದು, ಮಧ್ಯದಲ್ಲಿ ಒಂದು ದ್ವೀಪದಂತಾಗಿದೆ. ಈ ದ್ವೀಪವನ್ನು ಮಾಂಧಾತ ಪರ್ವತ ಅಥವಾ ಶಿವಪುರಿ ಎಂದು ಹೇಳುತ್ತಾರೆ. ಇದೇ ಮಾಂಧಾತ ಪರ್ವತದಲ್ಲಿ ಶ್ರೀಓಂಕಾರೇಶ್ವರ ಜ್ಯೋತಿರ್ಲಿಂಗದ ದೇವಸ್ಥಾನ ನೆಲೆಸಿದೆ. ಹಿಂದಿನ ಕಾಲದಲ್ಲಿ ಮಹಾರಾಜಾ ಮಾಂಧಾತನು ಇದೇ ಪರ್ವತದಲ್ಲಿ ತಪಸ್ಸನ್ನಾಚರಿಸಿ ಭಗವಾನ್ ಶಿವನನ್ನು ಒಲಿಸಿಕೊಂಡಿದ್ದನು. ಇದರಿಂದ ಈ ಪರ್ವತವನ್ನು ಮಾಂಧಾತ ಪರ್ವತ

ವೆಂದು ಹೇಳತೊಡಗಿದರು. ಈ ಜ್ಯೋತಿರ್ಲಿಂಗದ ಮಂದಿರದಲ್ಲಿ ಎರಡು ಪ್ರಾಕಾರಗಳನ್ನು ದಾಟಿ ಹೋಗಬೇಕಾಗುತ್ತದೆ. ಒಳಗೆ ಕತ್ತಲೆ ಇರುವುದರಿಂದ ಇಲ್ಲಿ ಯಾವಾಗಲೂ ದೀಪ ಉರಿಯುತ್ತಾ ಇರುತ್ತದೆ. ಓಂಕಾರೇಶ್ವರ ಲಿಂಗವು ಮನುಷ್ಯ ನಿರ್ಮಿತವಲ್ಲ. ಸ್ವಯಂ ಪ್ರಕೃತಿಯೇ ಇದನ್ನು ನಿರ್ಮಿಸಿದೆ. ಇದರ ನಾಲ್ಕೂ ಕಡೆ ಯಾವಾಗಲೂ ನೀರು ತುಂಬಿರುತ್ತದೆ. ಇಡೀ ಮಾಂಧಾತಾ ಪರ್ವತವೇ ಭಗವಾನ್ ಶಿವನ ರೂಪವೆಂದು ತಿಳಿಯ ಲಾಗುತ್ತದೆ. ಇದೇ ಕಾರಣದಿಂದ ಇದನ್ನು ಶಿವಪುರಿ ಎಂದೂ ಹೇಳುತ್ತಾರೆ. ಜನರು ಭಕ್ತಿಯಿಂದ ಈ ಪರ್ವತದ ಪ್ರದಕ್ಷಿಣೆ ಮಾಡುತ್ತಾರೆ. ಕಾರ್ತೀಕ ಪೌರ್ಣಮಿಯಂದು ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ಇಲ್ಲಿ ಜನರು ಭಗವಾನ್ ಶಿವನಿಗೆ ಕಡ್ಲೆ ಬೇಳೆ ನೈವೇದ್ಯ ಮಾಡುತ್ತಾರೆ. ರಾತ್ರಿಯ ಶಯನಾರತಿಯ ಕಾರ್ಯಕ್ರಮವು ತುಂಬ ಭವ್ಯವಾಗಿ ನಡೆಯುತ್ತದೆ. ತೀರ್ಥ ಯಾತ್ರಿಗಳು ಇದನ್ನು ಅವಶ್ಯವಾಗಿ ದರ್ಶಿಸಬೇಕು.

ಈ ಓಂಕಾರೇಶ್ವರ ಜ್ಯೋತಿರ್ಲಿಂಗದ ಎರಡು ಸ್ವರೂಪ ಗಳಿವೆ. ಒಂದನ್ನು ಅಮಲೇಶ್ವರ ಎಂಬ ಹೆಸರಿನಿಂದ ತಿಳಿಯ ಲಾಗುತ್ತದೆ. ಇದು ನರ್ಮದೆಯ ದಕ್ಷಿಣ ತೀರದಲ್ಲಿ ಓಂಕಾ ರೇಶ್ವರನಿಂದ ಸ್ವಲ್ಪದೂರದಲ್ಲಿದೆ. ಬೇರೆಯಾಗಿದ್ದರೂ ಎರಡನ್ನೂ ಒಂದೇ ಎಂದು ತಿಳಿಯುತ್ತಾರೆ. ಲಿಂಗದ ಎರಡು ಸ್ವರೂಪಗಳಿಗೆ ಸಂಬಂಧಿಸಿದಂತೆ ಪೌರಾಣಿಕ ಕಥೆ ಹೀಗಿದೆ: ಒಮ್ಮೆ ವಿಂಧ್ಯ ಪರ್ವತನು ಭಗವಾನ್ ಶಿವನನ್ನು ಆರು ತಿಂಗಳ ತನಕ ಕಠಿಣ ಉಪಾಸನೆಯನ್ನು ಮಾಡಿದನು. ಅವನ ಈ ಉಪಾಸನೆಯಿಂದ ಪ್ರಸನ್ನನಾದ ಭೂತಭಾವನ ಶಂಕರನು ಅಲ್ಲಿ ಪ್ರಕಟನಾದನು. ಅವನು ವಿಂಧ್ಯನಿಗೆ ಮನೋವಾಂಛಿತ ವರವನ್ನು ಕರುಣಿಸಿದನು. ವಿಂಧ್ಯಾಚಲದ ಈ ವರಪ್ರದಾನದ ಸಂದರ್ಭದಲ್ಲಿ ಅನೇಕ ಋಷಿವರ್ಯರು ಮತ್ತು ಮುನಿಗಳು ಆಗಮಿಸಿದರು. ಅವರ ಪ್ರಾರ್ಥನೆಯಂತೆ ಶ್ರೀಶಿವನು ತನ್ನ ಓಂಕಾರೇಶ್ವರ ಲಿಂಗವನ್ನು ಎರಡು ಭಾಗವಾಗಿಸಿದನು. ಒಂದರ ಹೆಸರು ಓಂಕಾರೇಶ್ವರ ಮತ್ತು ಇನ್ನೊಂದರ ಹೆಸರು ಅಮಲೇಶ್ವರ ಎಂದಾಯಿತು. ಎರಡೂ ಲಿಂಗಗಳ ಸ್ಥಾನ ಮತ್ತು ದೇವಾಲಯಗಳು ಬೇರೆಬೇರೆಯಾಗಿದ್ದರೂ ಅಸ್ತಿತ್ವ ಹಾಗೂ ಸ್ವರೂಪವು ಒಂದೇ ಎಂದು ತಿಳಿಯಲಾಗಿದೆ.

### ೫. ಕೇದಾರನಾಥ

ಪುರಾಣಗಳಲ್ಲಿ ಹಾಗೂ ಶಾಸ್ತ್ರಗಳಲ್ಲಿ ಶ್ರೀಕೇದಾರೇಶ್ವರ ಜ್ಯೋತಿರ್ಲಿಂಗದ ಮಹಿಮೆಯನ್ನು ಪದೇ-ಪದೇ ವರ್ಣಿಸಲಾಗಿದೆ. ಈ ಜ್ಯೋತಿರ್ಲಿಂಗವು ಪರ್ವತರಾಜ ಹಿಮಾಲಯದ ಕೇದಾರ ಎಂಬ ಶಿಖರದಲ್ಲಿ ನೆಲೆಸಿದೆ. ಇಲ್ಲಿಯ ಪ್ರಾಕೃತಿಕ ಶೋಭೆಯು ನೋಡಿದರೇನೇ ತಿಳಿಯುತ್ತದೆ. ಈ ಶಿಖರದ ಪಶ್ಚಿಮ ಭಾಗದಲ್ಲಿ ಹರಿಯುತ್ತಿರುವ ಪುಣ್ಯವತೀ ಮಂದಾಕಿನೀ ನದಿಯ ತೀರದಲ್ಲಿ ನೆಲೆಸಿದ ಶ್ರೀಕೇದಾರೇಶ್ವರನ ಮಂದಿರವು ತನ್ನ ಸ್ವರೂಪದಿಂದಲೇ ನಮಗೆ ಧರ್ಮ ಮತ್ತು ಆತ್ಮನ ಕಡೆಗೆ ಮುಂದರಿಯುವ ಸಂದೇಶ ವನ್ನು ಕೊಡುತ್ತದೆ. ಶಿಖರದ ಪೂರ್ವದಲ್ಲಿ ಅಲಕನಂದೆಯ ರಮ್ಯ ತೀರದಲ್ಲಿ ಬದರೀನಾಥನ ಪ್ರಸಿದ್ಧ ಮಂದಿರವಿದೆ. ಅಲಕ ನಂದಾ ಮತ್ತು ಮಂದಾಕಿನೀ ನದಿಗಳು ಕೆಳಗೆ ರುದ್ರಪ್ರಯಾಗದಲ್ಲಿ ಒಂದಾಗುತ್ತವೆ. ಎರಡೂ ನದಿಗಳ ಕೂಡಿದ ಪ್ರವಾಹವು ಕೆಳಗಿನ ದೇವಪ್ರಯಾಗದಲ್ಲಿ ಭಾಗೀರಥಿ ಗಂಗೆಯೊಂದಿಗೆ ಒಂದಾಗುತ್ತದೆ. ಈ ಪ್ರಕಾರ ಪರಮಪಾವನ ಗಂಗೆಯಲ್ಲಿ ಸ್ನಾನ ಮಾಡುವವರಿಗೆ ಶ್ರೀಕೇದಾರೇಶ್ವರ ಮತ್ತು ಶ್ರೀಬದರಿನಾಥನ ಚರಣಗಳನ್ನು ತೊಳೆದ ನೀರಿನ ಸ್ಪರ್ಶವು ಸುಲಭವಾಗಿ ಆಗುತ್ತದೆ.

ಅತಿ ಪವಿತ್ರ ಪುಣ್ಯದಾಯಕ ಈ ಜ್ಯೋತಿರ್ಲಿಂಗದ ಸ್ಥಾಪನೆಯ ವಿಷಯದಲ್ಲಿ ಪುರಾಣಗಳಲ್ಲಿ ಈ ಕಥೆಯನ್ನು ಕೊಡ ಲಾಗಿದೆ: ಅನಂತ ರತ್ನಗಳ ಜನಕ, ಅತಿಶಯ ಪವಿತ್ರ, ತಪಸ್ವಿಗಳ, ಋಷಿಗಳ, ಸಿದ್ಧರ, ದೇವತೆಗಳ ನಿವಾಸಭೂಮಿ ಪರ್ವತರಾಜ ಹಿಮಾಲಯದ ಕೇದಾರವೆಂಬ ಅತ್ಯಂತ ಶೋಭಾಮಯ ಶಿಖರ ದಲ್ಲಿ ಮಹಾತಪಸ್ವಿಗಳಾದ ಶ್ರೀನರ ಮತ್ತು ಶ್ರೀನಾರಾಯಣರು ಅನೇಕ ವರ್ಷಗಳವರೆಗೆ ಭಗವಾನ್ ಶಿವನನ್ನು ಒಲಿಸಿಕೊಳ್ಳಲು ಭಾರೀ ಕಠಿಣ ತಪಸ್ಸನ್ನಾಚರಿಸಿದರು. ಸಾವಿರಾರು ವರ್ಷಗಳವರೆಗೆ ಅವರು ನಿರಾಹಾರವಾಗಿದ್ದು, ಒಂದು ಕಾಲಮೇಲೆ ನಿಂತು ಶಿವನಾಮವನ್ನು ಜಪಿಸುತ್ತಿದ್ದರು. ಈ ತಪಸ್ಸಿನಿಂದಾಗಿ ಎಲ್ಲ ಲೋಕಗಳಲ್ಲಿ ಅವರ ಚರ್ಚೆ ಆಗುತ್ತಿತ್ತು. ದೇವತೆಗಳು ಋಷಿ-ಮುನಿಗಳು, ಯಕ್ಷರು, ಗಂಧರ್ವರು ಎಲ್ಲರೂ ಅವರ ಸಾಧನೆ ಹಾಗೂ ಸಂಯಮವನ್ನು ಕೊಂಡಾಡತೊಡಗಿದರು. ಚರಾಚರದ ಪಿತಾಮಹ ಬ್ರಹ್ಮದೇವರು ಮತ್ತು ಎಲ್ಲರ ಪಾಲನೆ-ಪೋಷಣೆ ಮಾಡುವ ಭಗವಾನ್ ಶ್ರೀವಿಷ್ಣುವೂ ಕೂಡ ನರ-ನಾರಾಯಣರ ತಪಸ್ಸನ್ನು ಬಹುವಾಗಿ ಪ್ರಶಂಸಿಸಿದರು. ಕೊನೆಗೆ ಶಂಕರನೂ ಕೂಡ ಅವರ ಆ ಕಠಿಣ ಸಾಧನೆಯಿಂದ ಪ್ರಸನ್ನನಾದನು. ಅವನು ಪ್ರತ್ಯಕ್ಷ ಪ್ರಕಟನಾಗಿ ಆ ಇಬ್ಬರೂ ಋಷಿಗಳಿಗೆ ದರ್ಶನವನ್ನು ಕರುಣಿಸಿ ದನು. ನರ-ನಾರಾಯಣರು ಭಗವಾನ್ ಉಮಾನಾಥನ ದರ್ಶನ ದಿಂದ ಭಾವವಿಹ್ವಲರಾಗಿ ಆನಂದಮಗ್ನರಾಗಿ ಅನೇಕ ಪ್ರಕಾರದ ಪವಿತ್ರ ಸ್ತುತಿಮಂತ್ರಗಳಿಂದ ಅವನನ್ನು ಪೂಜಿಸಿ, ಅರ್ಚಿಸಿದರು. ಭಗವಾನ್ ಶಿವನು ಅತ್ಯಂತ ಸಂತೋಷಗೊಂಡು ಅವರಿಗೆ ವರವನ್ನು ಕೇಳಲು ಹೇಳಿದನು. ಭಗವಾನ್ ಶಂಕರನ ಮಾತನ್ನು ಕೇಳಿ ಅವರೀರ್ವ ಋಷಿಗಳು "ದೇವಾಧಿದೇವ ಮಹಾದೇವಾ! ನೀನು ನಮ್ಮ ಮೇಲೆ ಪ್ರಸನ್ನನಾಗಿರುವೆಯಾದರೆ, ಭಕ್ತರ ಶ್ರೇಯಸ್ಸಿ ಗಾಗಿ ನೀನು ಎಂದೆಂದಿಗೂ ನಿನ್ನ ಸ್ವರೂಪವನ್ನು ಇಲ್ಲಿ ಸ್ಥಾಪಿಸುವ ಕೃಪೆಮಾಡು. ನೀನು ಇಲ್ಲಿ ನೆಲೆಸುವುದರಿಂದ ಈ ಸ್ಥಾನವು ಎಲ್ಲ ಪ್ರಕಾರದಿಂದ ಅತ್ಯಂತ ಪವಿತ್ರವಾದೀತು. ಇಲ್ಲಿಗೆ ಬಂದು ನಿನ್ನ ದರ್ಶನ-ಪೂಜೆ ಮಾಡುವ ಮನುಷ್ಯರಿಗೆ ನಿನ್ನ ಅವಿನಾಶಿನೀ ಭಕ್ತಿಯು ಪ್ರಾಪ್ತವಾಗಲಿ. ಪ್ರಭೋ! ನೀನು ಮನುಷ್ಯರ ಶ್ರೇಯಸ್ಸಿಗಾಗಿ ಮತ್ತು ಅವರ ಉದ್ಧಾರಕ್ಕಾಗಿ ನಿನ್ನ ಸ್ವರೂಪವನ್ನು ಇಲ್ಲಿ ಸ್ಥಾಪಿಸುವ ನಮ್ಮ ಪ್ರಾರ್ಥನೆಯನ್ನು ಅವಶ್ಯವಾಗಿ

ಸ್ವೀಕರಿಸಬೇಕು" ಎಂದು ಪ್ರಾರ್ಥಿಸಿಕೊಂಡರು. ಅವರ ಪ್ರಾರ್ಥನೆಯನ್ನು ಕೇಳಿ ಭಗವಾನ್ ಶಿವನು ಜ್ಯೋತಿರ್ಲಿಂಗದ ರೂಪದಲ್ಲಿ ಅಲ್ಲೇ ನೆಲೆಸಿದನು. ಕೇದಾರ ಎಂಬ ಹಿಮಾಲಯದ ಶಿಖರದ ಮೇಲೆ ನೆಲೆಸಿದ ಕಾರಣ ಈ ಜ್ಯೋತಿರ್ಲಿಂಗವನ್ನು ಕೇದಾರೇಶ್ವರ ಎಂದು ತಿಳಿಯಲಾಗುತ್ತದೆ.

## ೬. ಶ್ರೀಭೀಮೇಶ್ವರ

ಶ್ರೀಭೀಮೇಶ್ವರ ಜ್ಯೋತಿರ್ಲಿಂಗವು ಗೌಹಾಟಿಯ ಬಳಿ ಬ್ರಹ್ಮಪುರ ಎಂಬ ಪರ್ವತದಲ್ಲಿ ನೆಲೆಸಿದೆ. ಈ ಜ್ಯೋತಿರ್ಲಿಂಗದ ಸ್ಥಾಪನೆಯ ವಿಷಯದಲ್ಲಿ ಶಿವಪುರಾಣದಲ್ಲಿ ಈ ಕಥೆಯನ್ನು ಕೊಡಲಾಗಿದೆ:

ಹಿಂದಿನ ಕಾಲದಲ್ಲಿ ಭೀಮನೆಂಬ ಒಬ್ಬ ಮಹಾಪ್ರತಾಪಿ ರಾಕ್ಷಸನಿದ್ದನು. ಅವನು ಕಾಮರೂಪ ಪ್ರದೇಶದಲ್ಲಿ ತನ್ನ ತಾಯಿಯೊಂದಿಗೆ ಇರುತ್ತಿದ್ದನು. ಆ ಮಹಾಬಲಿಷ್ಠ ರಾಕ್ಷಸನು ರಾಕ್ಷಸ ರಾಜ ರಾವಣನ ತಮ್ಮ ಕುಂಭಕರ್ಣನ ಮಗನಾಗಿದ್ದನು. ಆದರೆ ಅವನು ತನ್ನ ತಂದೆಯನ್ನು ಎಂದೂ ನೋಡಿರಲಿಲ್ಲ. ಅವನಿಗೆ ಅರಿವು ಮೂಡುವ ಮೊದಲೇ ಶ್ರೀರಾಮನು ಕುಂಭಕರ್ಣನನ್ನು ವಧಿಸಿದ್ದನು. ಅವನು ತರುಣನಾದಾಗ ಅವನ ತಾಯಿಯು ಅವನಿಗೆ ಎಲ್ಲವನ್ನು ತಿಳಿಸಿದಳು. ಶ್ರೀವಿಷ್ಣುವಿನ ಅವತಾರನಾದ ಶ್ರೀರಾಮಚಂದ್ರನಿಂದ ತನ್ನ ತಂದೆಯ ವಧೆಯಾದ ಮಾತನ್ನು ಕೇಳಿ ಆ ಮಹಾಬಲಿ ಭೀಮರಾಕ್ಷಸನು ಕ್ರೋಧದಿಂದ ಉರಿದುಬಿದ್ದನು. ಅವನು ನಿರಂತರ ಭಗವಾನ್ ಶ್ರೀಹರಿಯನ್ನು ಕೊಲ್ಲುವ ವಿಚಾರ ಮಾಡತೊಡಗಿದನು. ಅವನು ತನ್ನ ಅಭೀಷ್ಟವನ್ನು ಪಡೆಯಲು ಒಂದು ಸಾವಿರವರ್ಷ ಕಠಿಣವಾದ ತಪಸ್ಸನ್ನಾಚರಿಸಿದನು. ಅವನ ತಪಸ್ಸಿನಿಂದ ಪ್ರಸನ್ನನಾದ ಬ್ರಹ್ಮದೇವರು ಅವನಿಗೆ ಲೋಕ ವಿಜಯಿಯಾಗುವ ವರವನ್ನು ಕರುಣಿಸಿದನು. ಬ್ರಹ್ಮದೇವರ ವರಪ್ರಭಾವದಿಂದ ಆ ರಾಕ್ಷಸನು ಎಲ್ಲ ಪ್ರಾಣಿಗಳನ್ನು ಪೀಡಿಸಿದನು. ದಾನವ ಭೀಮನು ದೇವಲೋಕದ ಮೇಲೆ ಆಕ್ರಮಣ ಮಾಡಿ ಇಂದ್ರಾದಿ ಎಲ್ಲ ದೇವತೆಗಳನ್ನು ಸೋಲಿಸಿ, ಅವರನ್ನು ಓಡಿಸಿ ತಾನೇ ಅಮರಾವತಿಗೆ ಒಡೆಯನಾದನು. ಇದಾದ ಬಳಿಕ ಶ್ರೀಹರಿಯನ್ನು ಯುದ್ಧದಲ್ಲಿ ಸೋಲಿಸಿದನು. ಬಳಿಕ ಅವನು ಕಾಮರೂಪದ ಪರಮಶಿವಭಕ್ತ ಸುದಕ್ಷಿಣರಾಜನ ಮೇಲೆ ಆಕ್ರಮಣ ಮಾಡಿ ಮಂತ್ರಿ-ಪರಿವಾರದೊಂದಿಗೆ ರಾಜನನ್ನು ಬಂಧನದಲ್ಲಿರಿಸಿದನು. ಈ ಪ್ರಕಾರ ಅವನು ಇಡೀ ಭೂಮಂಡಲದ ಮೇಲೆ ಅಧಿಕಾರವನ್ನು ಸ್ಥಾಪಿಸಿದನು. ಅವನು ಯಾರಿಗೂ ಧಾರ್ಮಿಕ ಕಾರ್ಯಗಳನ್ನು ಮಾಡಲು ಬಿಡುತ್ತಿರಲಿಲ್ಲ. ಹೀಗೆ ಯಜ್ಞ, ದಾನ, ತಪಸ್ಸು, ಸ್ವಾಧ್ಯಾಯ ಮುಂತಾದ ಎಲ್ಲ ಕರ್ಮಗಳು ನಿಂತುಹೋದುವು. ಭೀಮರಕ್ಕಸನ ಅತ್ಯಾಚಾರದ ಭೀಷಣತೆಯಿಂದ ಹೆದರಿದ ಋಷಿ-ಮುನಿಗಳು, ದೇವತೆಗಳು ಭಗವಾನ್ ಶಿವನಿಗೆ ಶರಣುಹೋದರು. ಶಿವನು ತಾನು ಆ ರಾಕ್ಷಸನನ್ನು ಸಂಹರಿಸುವುದಾಗಿ ಆಶ್ವಾಸನೆ ನೀಡಿದನು.

ಇತ್ತ ರಾಕ್ಷಸನ ಕಾರಾಗೃಹದಲ್ಲಿ ಬಿದ್ದಿರುವ ಸುದಕ್ಷಿಣ ರಾಜನು ಭಗವಾನ್ ಶಿವನನ್ನು ಧ್ಯಾನಿಸುತ್ತಾ, ತನ್ನಿದಿರು ಪಾರ್ಥಿವ ಶಿವಲಿಂಗವನ್ನಿರಿಸಿಕೊಂಡು ಪೂಜೆ ಮಾಡುತ್ತಿದ್ದನು. ರಾಕ್ಷಸನು ಇದನ್ನು ನೋಡಿ ಕ್ರೋಧದಿಂದ ಉನ್ಮತ್ತನಾಗಿ ತನ್ನ ಖಡ್ಗದಿಂದ ಆ ಪಾರ್ಥಿವಲಿಂಗದ ಮೇಲೆ ಪ್ರಹಾರ ಮಾಡಿದನು. ಆದರೆ ಆ ಖಡ್ಗವು ಶಿವಲಿಂಗಕ್ಕೆ ತಾಗುವ ಮೊದಲೇ ಆ ಶಿವಲಿಂಗದಿಂದ ಸಾಕ್ಷಾತ್ ಭೂತಭಾವನ ಶಂಕರನು ಅಲ್ಲೇ ಪ್ರಕಟನಾದನು, ತನ್ನ ಹುಂಕಾರ ಮಾತ್ರದಿಂದಲೇ ಆ ರಾಕ್ಷಸನನ್ನು ಸುಟ್ಟು ಬೂದಿ ಮಾಡಿದನು. ಭಗವಾನ್ ಶಿವನ ಈ ಅದ್ಭುತ ಕಾರ್ಯವನ್ನು ನೋಡಿ ಎಲ್ಲ ಋಷಿ-ಮುನಿಗಳೂ ದೇವತೆಗಳೂ ಅಲ್ಲಿಗೆ ಒಂದಾಗಿ ಬಂದು ಶ್ರೀಶಿವನನ್ನು ಸ್ತುತಿಸತೊಡಗಿದರು. ಅವರೆಲ್ಲರೂ ಭಗವಾನ್ ಶಿವನಲ್ಲಿ ಪ್ರಾರ್ಥಿಸಿದರು: "ಶಂಭೋಶಂಕರಾ! ನೀನು ಲೋಕಕಲ್ಯಾಣಕ್ಕಾಗಿ ಎಂದೆಂದಿಗೂ ಇಲ್ಲೇ ವಾಸಮಾಡು. ಈ ಕ್ಷೇತ್ರವನ್ನು ಶಾಸ್ತ್ರಗಳು ಅಪವಿತ್ರವೆಂದು ಹೇಳಿರುವುವು. ನಿನ್ನ ನಿವಾಸದಿಂದ ಇದು ಪರಮ ಪವಿತ್ರಪುಣ್ಯಕ್ಷೇತ್ರವಾದೀತು." ಅವರೆಲ್ಲರ ಪ್ರಾರ್ಥನೆಯನ್ನು ಭಗವಾನ್ ಶಿವನು ಮನ್ನಿಸಿ, ಅಲ್ಲೇ ಜ್ಯೋತಿರ್ಲಿಂಗದ ರೂಪದಲ್ಲಿ ಸದಾಕಾಲ ವಾಸಿಸಿದನು. ಆ ಜ್ಯೋತಿರ್ಲಿಂಗವು ಭೀಮೇಶ್ವರ ಹೆಸರಿನಿಂದ ಪ್ರಖ್ಯಾತವಾಗಿದೆ.

(ಮುಂದುವರಿಯುವುದು)

**Statement about ownership and other particulars about Viveka Prabha (according to Form IV Rule 8, circulated by Registrar of Newspapers for India).**

| | | |
|---|---|---|
| 1. Place of Publication | : | Mysore 570 020 |
| 2. Periodicity of Publication | : | Monthly |
| 3. Printer's Name | : | *Swami Atmavidananda* |
| Nationality | : | Indian |
| Address | : | Sri Ramakrishna Ashrama Yadavagiri, Mysore 570020 |
| 4. Publisher's Name | : | *J B Pattabhi* |
| Nationality | : | Indian |
| Address | : | Pattabi Enterprises, Ramavilasa Road, Mysore |
| 5. Editor's Name | : | *Swami Nityasthananda* |
| Nationality | : | Indian |
| Address | : | Sri Ramakrishna Ashrama Yadavagiri, Mysore 570020 |
| 6. Name & Addresses of the individuals who own the newspaper and partners or share-holders holding more than 1% of the capital | : | Sri Ramakrishna Ashrama Yadavagiri, Mysore 570020 |

I, Swami Atmavidananda, hereby declare that the particulars given above are true to the best of my knowledge and belief.

Sd.
*Swami Atmavidananda*
01.03.2003 Signature of the Publisher